ದಿನಾಂಕ: 24-01-2019 ರಂದು ಮಧ್ಯಾಹ್ನ:12.00 ಗಂಟೆಗೆ ಅಧ್ಯಕ್ಷರು, ಲೆಕ್ಕಪತ್ರ ಸ್ಥಾಯಿ ಸಮಿತಿ ರವರ ಅಧ್ಯಕ್ಷತೆಯಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕೇಂದ್ರ ಕಛೇರಿ ವ್ಯಾಪ್ತಿಗೆ ಸಂಬಂಧಿಸಿದ ಮುಖ್ಯ ಲೆಕ್ಕಾಧಿಕಾರಿ ಕಛೇರಿಯ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರೊಂದಿಗೆ ಪರಿಚಯ ಸಭೆ ನಡೆಸಿದ ನಡವಳಿಕೆಗಳು

ಸಭೆಗೆ ಹಾಜರಿದ್ದ ಲೆಕ್ಕಪತ್ರ ಸ್ಥಾಯಿ ಸಮಿತಿ ಕಛೇರಿಯ ಅಧ್ಯಕ್ಷರು ಹಾಗೂ ಸದಸ್ಯರುಗಳು:

| ಕ್ರಮ ಸಂ. | ವಾರ್ಡ್ ಸಂಖ್ಯೆ | ಹೆಸರುಗಳು | ವಾರ್ಡ್ ಹೆಸರು | ಪದನಾಮ |
|---|---|---|---|---|
| 1 | 42 | ಶ್ರೀ. ಎಂ.ವೇಲುನಾಯಕರ್ | ಲಕ್ಷ್ಮೀದೇವಿನಗರ | ಅಧ್ಯಕ್ಷರು |
| 2 | 161 | ಶ್ರೀಮತಿ. ರಾಜೇಶ್ವರಿ ಚೋಳರಾಜ ಕೆ | ಹೊಸಕೆರೆಹಳ್ಳಿ | ಸದಸ್ಯರು |
| 3 | 1 | ಶ್ರೀಮತಿ. ಚಂದ್ರಮ್ಮ ಕೆಂಪೇಗೌಡ | ಕೆಂಪೇಗೌಡ | ಸದಸ್ಯರು |
| 4 | 50 | ಶ್ರೀಮತಿ. ಮೀನಾಕ್ಷಿ | ಬೆನ್ನಿಗಾನಹಳ್ಳಿ | ಸದಸ್ಯರು |
| 5 | 63 | ಶ್ರೀ. ಎಂ.ಕೆ.ಗುಣಶೇಖರ್ | ಜಯಮಹಲ್ | ಸದಸ್ಯರು |
| 6 | 30 | ಶ್ರೀ. ನೌಶೀರ್ ಅಹ್ಮದ್ | ಕಾಡುಗೊಂಡನಹಳ್ಳಿ | ಸದಸ್ಯರು |

ಹಾಜರಿದ್ದ ಅಧಿಕಾರಿ ಹಾಗೂ ಸಿಬ್ಬಂದಿಗಳು:

| ಕ್ರಮ ಸಂ. | ಹೆಸರುಗಳು | ಪದನಾಮ |
|---|---|---|
| 1 | ಶ್ರೀ.ಮಹದೇವ | ಮು.ಲೆ.ಅ. |
| 2 | ಶ್ರೀ.ವಿ.ವಿಜಯ್ | ಲೆಕ್ಕ ಅಧೀಕ್ಷಕರು |
| 3 | ಶ್ರೀ. ರಾಮಮೂರ್ತಿ. ಆರ್. | ಲೆಕ್ಕ ಅಧೀಕ್ಷಕರು |
| 4 | ಶ್ರೀ.ಕೆ.ಎಸ್.ದಯಾನಂದ | ಲೆಕ್ಕ ಅಧೀಕ್ಷಕರು |
| 5 | ಶ್ರೀ.ಮೊಹಮ್ಮದ್ ಇಸಾಕ್ | ಲೆಕ್ಕ ಅಧೀಕ್ಷಕರು |
| 6 | ಶ್ರೀ.ಎಸ್.ಜಿ.ನಾಗರಾಜ | ಲೆಕ್ಕ ಅಧೀಕ್ಷಕರು |
| 7 | ಶ್ರೀ.ಜಿ.ಮೂರ್ತಿ | ಲೆಕ್ಕ ಅಧೀಕ್ಷಕರು |
| 8 | ಶ್ರೀಮತಿ.ಅನಿತಾ ಎಂ. | ಲೆಕ್ಕ ಅಧೀಕ್ಷಕರು |
| 9 | ಶ್ರೀ.ಕೆಂಪೇಗೌಡ | ಲೆಕ್ಕ ಅಧೀಕ್ಷಕರು |
| 10 | ಶ್ರೀ.ಶಶಿಧರ್ | ಸ.ನಿ.(ಹ) |
| 11 | ಶ್ರೀ.ಪ್ರಸನ್ನ ಕುಮಾರ್ ಪ್ರವೀಣ್.ಎ. | ಸ.ನಿ.(ಹ) |
| 12 | ಶ್ರೀ.ರವಿಕುಮಾರ್ | ಪ್ರ.ದ.ಸ. |
| 13 | ಶ್ರೀ.ಎಂ.ಬಿ.ಮಹದೇವ ಕುಮಾರ್ | ಪ್ರ.ದ.ಸ. |
| 14 | ಶ್ರೀ.ಕೆ.ಸುರೇಶ್ | ಪ್ರ.ದ.ಸ. |
| 15 | ಶ್ರೀ.ಪಿ.ವೆಂಕಟಲಕ್ಷ್ಮಿ | ಪ್ರ.ದ.ಸ. |
| 16 | ಶ್ರೀ.ರಾಧಿಕ ಸಿ.ವಿ. | ಪ್ರ.ದ.ಸ. |
| 17 | ಶ್ರೀ.ಬೋರಯ್ಯ | ಪ್ರ.ದ.ಸ. |

ಅಧ್ಯಕ್ಷರು
ಲೆಕ್ಕಪತ್ರ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

| ಕ್ರಮ ಸಂ. | ಹೆಸರುಗಳು | ಪದನಾಮ |
|---|---|---|
| 18 | ಶ್ರೀ.ಗೋವಿಂದ.ಸಿ. | ಪ್ರ.ದ.ಸ. |
| 19 | ಶ್ರೀ.ರಘುರಾಮ್.ಬಿ. | ಪ್ರ.ದ.ಸ. |
| 20 | ಶ್ರೀ.ಆರ್.ವಿ.ಪುನೀತ್ ಕುಮಾರ್ | ದ್ವಿ.ದ.ಸ. |
| 21 | ಶ್ರೀ.ಕಾರ್ತಿಕ್ ವಿ. | ದ್ವಿ.ದ.ಸ. |
| 22 | ಶ್ರೀ.ಗುರುರಾಜ್.ಎಸ್.ಕುರೂರ್ | ದ್ವಿ.ದ.ಸ. |

ಮೊದಲನೆಯದಾಗಿ ಅಧ್ಯಕ್ಷರು, ಲೆಕ್ಕಪತ್ರ ಸ್ಥಾಯಿ ಸಮಿತಿ ರವರು ಸಭೆಯಲ್ಲಿ ಉಪಸ್ಥಿತರಿದ್ದ ಎಲ್ಲಾ ಅಧಿಕಾರಿ ಮತ್ತು ಸಿಬ್ಬಂದಿ ವರ್ಗದವರನ್ನು ಸ್ವಾಗತಿಸುತ್ತಾ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕೇಂದ್ರ ಕಛೇರಿ ವ್ಯಾಪ್ತಿಗೆ ಸಂಬಂಧಿಸಿದ ಮುಖ್ಯ ಲೆಕ್ಕಾಧಿಕಾರಿ ಕಛೇರಿಯ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರೊಂದಿಗೆ ಪರಿಚಯ ಸಭೆ ಹಾಗೂ ಇತರೆ ವಿಷಯಗಳ ಬಗ್ಗೆ ಚರ್ಚಿಸಲು ಈ ಸಭೆಯನ್ನು ಕರೆಯಲಾಗಿದೆ ಎಂದು ತಿಳಿಸಿದರು.

ಸದರಿ ಸಭೆಯಲ್ಲಿ ಉಪಸ್ಥಿತರಿದ್ದ ಮುಖ್ಯ ಲೆಕ್ಕ ಅಧಿಕಾರಿ ಕಛೇರಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಎಲ್ಲಾ ಅಧಿಕಾರಿ ಮತ್ತು ಸಿಬ್ಬಂದಿ ವರ್ಗದವರನ್ನು ತಮ್ಮ ತಮ್ಮ ಹೆಸರು ಮತ್ತು ಪದನಾಮದೊಂದಿಗೆ ಪರಿಚಯಿಸಿಕೊಳ್ಳುವುದಾಗಿ ತಿಳಿಸಿದರು. ಸದರಿ ಇಲಾಖೆಯಲ್ಲಿ ಬಿ.ಬಿ.ಎಂ.ಪಿ. ಅಧಿಕಾರಿ ಸಿಬ್ಬಂದಿಗಳು ಹಾಗೂ ಎರವಲು ಸೇವೆಯ ಮೇಲೆ ಕಾರ್ಯ ನಿರ್ವಹಿಸುತ್ತಿರುವ ಅಧಿಕಾರಿ ಸಿಬ್ಬಂದಿಗಳು ಎಷ್ಟು ಜನರಿದ್ದಾರೆ ಎಂದು ಪ್ರಶ್ನಿಸಿದರು.

ಮುಖ್ಯ ಲೆಕ್ಕ ಅಧಿಕಾರಿ ರವರು ಕಛೇರಿಯ ಅಧಿಕಾರಿ ಸಿಬ್ಬಂದಿ ವರ್ಗದವರನ್ನು ಪರಿಚಯಿಸಿ ಮಾತನಾಡುತ್ತಾ ಬಿ.ಬಿ.ಎಂ.ಪಿ. ಸಿಬ್ಬಂದಿಗಳ ಕೊರತೆಯಿಂದಾಗಿ ಸದರಿ ಕಛೇರಿಯಲ್ಲಿ ಎರವಲು ಆಧಾರದ ಮೇಲೆ 4 ಜನ ಅಧಿಕಾರಿಗಳು ಕಾರ್ಯ ನಿರ್ವಹಿಸುತ್ತಿದ್ದಾರೆ ಇನ್ನೂ ಬೇರೆ ಬೇರೆ ಇಲಾಖೆಯಿಂದ ಉಪ ನಿಯಂತ್ರಕರು ಹಣಕಾಸು ರವರಿಗೆ ಎರವಲು ಸೇವೆ ಆಧಾರದ ಮೇಲೆ ನಿಯೋಜಿಸಿಕೊಳ್ಳಬಹುದು. ಈ ಕಛೇರಿಗೆ ಅಧಿಕಾರಿ ಸಿಬ್ಬಂದಿಗಳ ಕೊರತೆಯಿಂದ ಕಛೇರಿ ಕೆಲಸ ಕಾರ್ಯಗಳು ಕುಂಠಿತಗೊಳ್ಳುತ್ತಿದೆ ಎಂದು ತಿಳಿಸಿದರು.

ಅಧ್ಯಕ್ಷರು ಲೆಕ್ಕಪತ್ರ ಸ್ಥಾಯಿ ಸಮಿತಿ ರವರು ಸದರಿ ಕಛೇರಿಗೆ ಅಧಿಕಾರಿ ಮತ್ತು ಸಿಬ್ಬಂದಿಗಳ ಕೊರತೆಯಿದೆ ಎಂದು ಆಯುಕ್ತರವರಿಂದ ಅನುಮೋದನೆ ಪಡೆಯಲು ಟಿಪ್ಪಣಿ ತಯಾರಿಸಿ ಮಂಡಿಸಲು ತಿಳಿಸಿದರು.

ಮುಖ್ಯ ಲೆಕ್ಕ ಅಧಿಕಾರಿ ರವರು ಮಾತನಾಡುತ್ತಾ ಪ್ರೌಢಶಾಲೆಗಳಲ್ಲಿ, ಕಂದಾಯ ಇಲಾಖೆಯಲ್ಲಿ ಹಾಗೂ ಇತರೆ ಇಲಾಖೆಗಳಲ್ಲಿಯೂ ಸಹ ಸಿಬ್ಬಂದಿಯ ಕೊರತೆ ಇರುವುದರಿಂದ ಈ ಬಗ್ಗೆ ಪರಿಶೀಲಿಸಿ, ಕೆ.ಪಿ.ಎಸ್.ಸಿ. ಇಲಾಖೆಗೆ ಬಿ.ಬಿ.ಎಂ.ಪಿ. ಇಲಾಖೆಯ ಸಿಬ್ಬಂದಿಗಳ ನೇಮಕಾತಿಗಾಗಿ ಸಹಾಯಕ ಆಯುಕ್ತರು(ಆಡಳಿತ) ರವರಿಗೆ ಟಿಪ್ಪಣಿಯನ್ನು ಮಂಡಿಸಲು ಅಧ್ಯಕ್ಷರು ಸೂಚಿಸಿದರು.

ಅಧ್ಯಕ್ಷರು
ಲೆಕ್ಕಪತ್ರ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ಅಧ್ಯಕ್ಷರು ಮಾತನಾಡುತ್ತಾ ನಮ್ಮ ಬಿ.ಬಿ.ಎಂ.ಪಿ.ಯಲ್ಲಿ ಲೆಕ್ಕಪತ್ರ ಸ್ಥಾಯಿ ಸಮಿತಿಯು ಬಹಳ ಮುಖ್ಯ ಪಾತ್ರ ಹೊಂದಿದೆ. ಪಾಲಿಕೆಗೆ ಸಂಬಂಧಪಟ್ಟ ಎಲ್ಲ ಇಲಾಖೆಯಲ್ಲಿ ಆಯವ್ಯಯಗಳ ಬಗ್ಗೆ, ಕಾಮಗಾರಿ ಬೋಗಸ್ ಬಿಲ್ಲುಗಳ ಬಗ್ಗೆ ಹಾಗೂ ಇತರೆ ಬಿಲ್ಲುಗಳ ಬಗ್ಗೆ ಪರಿಶೀಲಿಸಬೇಕಾಗುತ್ತದೆ. ಆದುದ್ದರಿಂದ, ಸಿಬ್ಬಂದಿಗಳ ಕೊರತೆ ಇದೆ ಎಂದರೆ ಕಛೇರಿ ಕೆಲಸ ಕಾರ್ಯಗಳನ್ನು ನಿರ್ವಹಿಸುವುದು ಕಷ್ಟಕರವಾಗುತ್ತದೆ ಕೂಡಲೇ ಆಯುಕ್ತರಿಂದ ಅನುಮೋದನೆ ಪಡೆಯಲು ಟಿಪ್ಪಣಿಯನ್ನು ತಯಾರಿಸಿ ಮಂಡಿಸಲು ತಿಳಿಸಲಾಯಿತು.

ಕಳೆದ 2-3 ತಿಂಗಳ ಹಿಂದೆ ನಮ್ಮ ಬಿ.ಬಿ.ಎಂ.ಪಿ. ವತಿಯಿಂದ ಎಲ್ಲಾ ವೃಂದದಿಂದ 895 ಹುದ್ದೆಗೆ ಕೆ.ಪಿ.ಎಸ್.ಸಿ. ಇಲಾಖೆಗೆ ನೇಮಕಾತಿಗಾಗಿ ಪ್ರಸ್ತಾವನೆಯನ್ನು ಸಲ್ಲಿಸಿರುವುದು ದಿನಪತ್ರಿಕೆಯಲ್ಲಿ ಪ್ರಕಟವಾಗಿತ್ತು. ಅದನ್ನು ಪ್ರೋಸಸ್ ಮಾಡಲು ಸೂಚನೆ ನೀಡಿದರು.

**ಬ್ಯಾಂಕ್ ಖಾತೆಗಳು**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಸಂಬಂಧಪಟ್ಟಂತೆ ಎಷ್ಟೆಷ್ಟು ಬ್ಯಾಂಕ್ ಖಾತೆಗಳು ಇದೆ? ಯಾವ ಯಾವ ಇಲಾಖೆಯವರು ಮೈನ್‌ಟೈನ್ ಮಾಡುತ್ತಿದ್ದಾರೆ ಎಂಬುದರ ಬಗ್ಗೆ ಮಾಹಿತಿ ಕೇಳಲಾಯಿತು.

ಸರ್ಕಾರದ ಆದೇಶದ ಪ್ರಕಾರ ಪಾಲಿಕೆಯ ಪ್ರೌಢ ಶಾಲೆ ಹಾಗೂ ಕಾಲೇಜುಗಳು, ಹಾಗೂ ಇತರೆ ಇಲಾಖೆಗಳು ಸೇರಿದಂತೆ ಪಾಲಿಕೆಯ ಕೇಂದ್ರ ಕಛೇರಿಯಲ್ಲಿಯೇ ಬ್ಯಾಂಕ್ ಖಾತೆಯನ್ನು ತೆರೆಯಲಾಗಿದೆ. 200 ಆಪರೇಟೀವ್ ಅಕೌಂಟ್, 200 ಇನ್ ಆಪರೇಟೀವ್ ಅಕೌಂಟ್ ಇದೆ. 40 ಬ್ಯಾಂಕ್ ಖಾತೆಗಳನ್ನು ರದ್ದುಪಡಿಸಲುಪತ್ರವನ್ನು ಬರೆಯಲಾಗಿದೆ. ಬ್ಯಾಂಕ್‌ನವರು ಈ ಹಿಂದೆ ಖಾತೆಯನ್ನು ತೆರೆದಿರುವವರ ಸಹಿ ಹೊಂದಾಣಿಕೆ ಆಗದೇ ಇರುವುದರಿಂದ ಖಾತೆಯನ್ನು ರದ್ದುಪಡಿಸಲು ಸಾಧ್ಯವಿಲ್ಲವೆಂದು ತಿಳಿಸಿರುತ್ತಾರೆ. ಅದನ್ನು ಅಪ್‌ಡೇಟ್ ಮಾಡುತ್ತಿಲ್ಲ ಈ ವಿಷಯವನ್ನು ಆಯುಕ್ತರವರ ಗಮನಕ್ಕೆ ತರಲಾಗಿದೆ ಎಂದು ಮುಖ್ಯ ಲೆಕ್ಕಾಧಿಕಾರಿಗಳು ಉತ್ತರಿಸಿದರು.

ಅಧ್ಯಕ್ಷರು ಮಾತನಾಡುತ್ತಾ ಅಧಿಕಾರಿಗಳ ಹೆಸರಿಯಲ್ಲಿಯೇ ಖಾತೆ ತೆರೆದಿದ್ದರೆ ಅದನ್ನು ರದ್ದುಪಡಿಸಲಾಗುವುದಿಲ್ಲ ಹಾಗೆಯೇ ಪಾಲಿಕೆಯಮುಖ್ಯ ಲೆಕ್ಕಾಧಿಕಾರಿಗಳು ಅಥವಾ ಆಯುಕ್ತರವರ ಹೆಸರಿನಲ್ಲಿಖಾತೆಯನ್ನು ತೆರೆದಿದ್ದರೆ ಹಾಗೂ ಅವರು ವರ್ಗಾವಣೆಗೊಂಡ ನಂತರ ಬೇರೆ ಯಾರಾದರು ಆ ಹುದ್ದೆಗೆ ಬಂದ ಅಧಿಕಾರಿಗಳ ಸಿ.ಟಿ.ಸಿ. ಆಧಾರದ ಮೇಲೆ ರದ್ದುಪಡಿಸಬಹುದು ಎಂದು ತಿಳಿಸಿದರು.

ಪಾಲಿಕೆಯ ಪ್ರೌಢ ಶಾಲೆ ಹಾಗೂ ಕಾಲೇಜುಗಳಿಗೆ ಸರ್ವ ಶಿಕ್ಷಾ ಅಭಿಯಾನದಿಂದ ನೇರವಾಗಿ ಆಪರೇಟೀವ್ ಅಕೌಂಟ್‌ನಲ್ಲಿ ಜಮಾ ಆಗುವುದು ಎಂದು ಮುಖ್ಯ ಲೆಕ್ಕಾಧಿಕಾರಿಗಳು ತಿಳಿಸಿದರು.

ಸರ್ವ ಶಿಕ್ಷಾ ಅಭಿಯಾನದಿಂದ ಪಾಲಿಕೆ ಖಾತೆಗೆ ಬರುತ್ತದೆಯೇ ಅಥವಾ ನೇರವಾಗಿ ಶಾಲೆಗಳಿಗೆ ತಲುಪುತ್ತದೆಯೇ ಎಂದು ಪ್ರಶ್ನಿಸಿಸಲಾಯಿತು ಹಾಗೂ ಇದರ ಮಾಹಿತಿಯನ್ನು ಒದಗಿಸುವಂತೆ ಅಧ್ಯಕ್ಷರು, ಲೆಕ್ಕಪತ್ರ ಸ್ಥಾಯಿ ಸಮಿತಿಯವರು ಕೋರಿದರು ಮತ್ತು ಸರ್ಕಾರದಿಂದ ಬರುವ ಅನುದಾನವನ್ನು ಪಾಲಿಕೆಯ ಆಡಳಿತಾತ್ಮಕ ಮೂಲಕವೇ ಬಿ.ಬಿ.ಎಂ.ಪಿ. ಶಾಲೆಗಳಿಗೆ ನೇರವಾಗಿ ನೀಡಲಾಗುತ್ತಿದೆಯೇ?

ಅಧ್ಯಕ್ಷರು
ಲೆಕ್ಕಪತ್ರ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ಇದಕ್ಕೆ ಉತ್ತರವಾಗಿ ಪಾಲಿಕೆಯ ಶಾಲಾ ಕಾಲೇಜುಗಳ ಖಾತೆ ಜಾಬ್ ಸಂಖ್ಯೆಯನ್ನು ನೀಡಿರುವಂತೆ ನೇರವಾಗಿ ಸದರಿ ಖಾತೆಗೆ ಜಮಾ ಆಗುತ್ತಿದೆ ಎಂದು ತಿಳಿಸಿದರು ಮತ್ತು ಮಾಹಿತಿಯನ್ನು ನೀಡುವುದಾಗಿ ಮುಖ್ಯ ಲೆಕ್ಕಾಧಿಕಾರಿಗಳು ತಿಳಿಸಿದರು. ನಿಯಮದಲ್ಲಿ ಸೂಚಿಸಿರುವಂತೆ ಕರ್ನಾಟಕದ ರಾಜ್ಯದಎಲ್ಲ ಶಾಲೆಗಳಿಗೆ ನೇರವಾಗಿ ಅನುದಾನವನ್ನು ನೀಡುತ್ತಿದ್ದಾರೆ.

ಅಧ್ಯಕ್ಷರು, ಲೆಕ್ಕಪತ್ರ ಸ್ಥಾಯಿ ಸಮಿತಿ ರವರು ಮಾತನಾಡುತ್ತಾ ಪಾಲಿಕೆ ವ್ಯಾಪ್ತಿಯಲ್ಲಿ ಎಷ್ಟು ಸ್ವತ್ತುಗಳು ಇದೆ, ಯಾವ ಯಾವ ಸ್ವತ್ತುಗಳ ಮೇಲೆ ಲೋನ್ ತೆಗೆದುಕೊಂಡಿರುತ್ತಾರೆ, ಕೌನ್ಸಿಲ್ ಸಭೆಯಲ್ಲಿ ಪಾಲಿಕೆಯ 5 ಕಟ್ಟಡಗಳ ಲೋನ್ ಕ್ಲಿಯರ್ ಮಾಡಿದ್ದೇವೆ ಇನ್ನು ಬಾಕಿ ಕಟ್ಟಡಗಳ ಮೇಲೆ ತೆಗೆದುಕೊಂಡಿರುವ ಲೋನ್ ಕ್ಲಿಯರ್ ಮಾಡಬೇಕು ಎಂದು ಚರ್ಚಿಸಿದಂತೆ ಅದರ ಮಾಹಿತಿಯನ್ನು ನೀಡುವಂತೆ ತಿಳಿಸಿದರು.

**ಬ್ಯಾಂಕ್ ಲೋನ್**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಒಟ್ಟು 11 ಕಟ್ಟಡಗಳನ್ನು ಅಡಮಾನವಿಟ್ಟು ಲೋನ್ ತೆಗೆದುಕೊಳ್ಳಲಾಗಿದೆ. ಅದರಂತೆ 2016-17 ನೇ ಸಾಲಿನಿಂದ ಹುಡ್ಕೋ ಸಂಸ್ಥೆಯವರಿಗೆ ರೂ.1623.00 ಕೋಟಿಗಳ ಮೊತ್ತವನ್ನು ಪಾವತಿಸಿ 6-ಕಟ್ಟಡಗಳನ್ನು ಬಿಡುಗಡೆಗೊಳಿಸಿದೆ. **(1.ಕೆಂಪೇಗೌಡ ಮ್ಯೂಸಿಯಂ ಮೆಯೋಹಾಲ್, 2. ಮೆಯೋಹಾಲ್ ಬಿಲ್ಡಿಂಗ್, 3.ಮಲ್ಲೇಶ್ವರಂ ಮಾರ್ಕೆಟ್, 4.ಜಾನ್ಸನ್ ಮಾರ್ಕೆಟ್, 5.ರಾಜಾಜಿನಗರ ಕಾಂಪ್ಲೆಕ್ಸ್ ಮತ್ತು 6.ಸ್ಲಾಟರ್ ಹೌಸ್.)** ಉಳಿದ ಮೊತ್ತ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಬ್ಯಾಂಕ್‌ನಿಂದ ರೂ.652.00 ಕೋಟಿಗಳು ಮತ್ತು ಕೆ.ಯು.ಐ.ಡಿ.ಎಫ್.ಸಿ. ಸಂಸ್ಥೆಯಿಂದ ರೂ.51.00 ಕೋಟಿಗಳು ಸೇರಿ ಒಟ್ಟು ರೂ.703.00 ಕೋಟಿಗಳು 5-ಕಟ್ಟಡಗಳಲ್ಲು ಬಿಡಿಸಿಕೊಂಡಿಲ್ಲ ಪೆಂಡಿಂಗ್ ಇದೆ. **(1.ಕೆ.ಆರ್.ಮಾರ್ಕೆಟ್, 2.ದಾಸಪ್ಪ ಬಿಲ್ಡಿಂಗ್, 3.ಪಬ್ಲಿಕ್ ಯೂಟಿಲಿಟಿ ಬಿಲ್ಡಿಂಗ್ ಮೆಯೋಹಾಲ್, 4.ಬಿ.ಬಿ.ಎಂ.ಪಿ. ಕಛೇರಿ ಕಟ್ಟಡ-ಈಸ್ಟ್ ಮತ್ತು 5.ಕಲಾಸಿಪಾಳ್ಯ ಮಾರ್ಕೆಟ್)** ಮಾರ್ಚ್-2019 ರೊಳಗೆ ಎಲ್ಲ ಲೋನ್‌ಗಳು ಕ್ಲಿಯರ್ ಆಗುತ್ತದೆ ಎಂದು ಎಸ್.ಬಿ.ಐ. ಬ್ಯಾಂಕ್‌ನ ಡಿ.ಜಿ.ಎಂ. ರವರಿಗೆ ಆಯುಕ್ತರು ಪತ್ರವನ್ನು ಬರೆದಿದ್ದಾರೆ ಎಂದು ಮುಖ್ಯ ಲೆಕ್ಕಾಧಿಕಾರಿಗಳು ಉತ್ತರಿಸಿದರು.

ಅಧ್ಯಕ್ಷರು, ಲೆಕ್ಕಪತ್ರ ಸ್ಥಾಯಿ ಸಮಿತಿ ರವರು ಮಾತನಾಡುತ್ತಾ ತಾವು ಬಜೆಟ್ ಎಸ್ಟಿಮೇಟ್ ತಯಾರಿಸಿರುವ ಪಟ್ಟಿಯಂತೆ ಹೋದ ಸಾಲಿನಲ್ಲಿ ಬಜೆಟ್ ಎಸ್ಟಿಮೇಟ್ ಎಷ್ಟು ಇತ್ತು? ಅದರಂತೆ ಈವರೆಗೆ ಯಾವ ಯಾವ ಕೆಲಸಗಳನ್ನು ನಿರ್ವಹಿಸಲಾಗಿದೆ? ಎಂದು ಕೇಳಲಾಯಿತು

ಇದಕ್ಕೆ ಮುಖ್ಯ ಲೆಕ್ಕಾಧಿಕಾರಿಗಳು ಬಜೆಟ್ ಎಸ್ಟಿಮೇಟ್ ತಯಾರಿಸಿರುವ ಪಟ್ಟಿಯನ್ನು ವಿವರಿಸಿದರು.

**ಕಂದಾಯ:**

ಕಂದಾಯ ಇಲಾಖೆಯ ವಸೂಲಾತಿ ಬಗ್ಗೆ ಮಾಹಿತಿಯನ್ನು ಕೋರಲಾಗಿ, ಕಂದಾಯ ಇಲಾಖೆಯಲ್ಲಿ ಸುಮಾರು ರೂ.2277 ಕೋಟಿಗಳ ಬಾಕಿ ಮೊತ್ತಗಳನ್ನು ವಸೂಲಿ ಮಾಡಬೇಕಾಗಿರುತ್ತದೆ. ವಲಯದ ಜಂಟಿ ಆಯುಕ್ತರವರ ಹಂತದಲ್ಲಿಯೇ ಸದರಿ ಮೊತ್ತವನ್ನು ಸಂಬಂಧಪಟ್ಟವರಿಂದ ವಸೂಲಾತಿ ಮಾಡುವುದಾಗಿ ಕ್ರಮ ಕೈಗೊಳ್ಳಲು ಸೂಚನೆ ನೀಡಬೇಕೆಂದು ತಿಳಿಸಿದರು.

ಅಧ್ಯಕ್ಷರು
ಲೆಕ್ಕಪತ್ರ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ವಿಶೇಷ ಆಯುಕ್ತರು(ಹಣಕಾಸು) ರವರ ಮಾರ್ಚ್-2019 ರೊಳಗೆ ಖಾಲಿ ನಿವೇಶನಗಳ ಪಟ್ಟಿ ಹಾಗೂ ಅದರ ವಸೂಲಾತಿಗಳ ಮಾಹಿತಿಯನ್ನು ಕ್ರೂಢೀಕರಿಸಲು ಸೂಚನೆ ನೀಡಿರುತ್ತಾರೆ.

ಅಧ್ಯಕ್ಷರು ಮಾತನಾಡುತ್ತಾ ಬೆಂಗಳೂರು ನಗರದ ದೊಡ್ಡ ದೊಡ್ಡ ಕಟ್ಟಡಗಳು, ಅಪಾರ್ಟ್‌ಮೆಂಟ್ಸ್, ಮಾಲ್ಸ್, ಖಾಲಿ ನಿವೇಶನಗಳು, ಕೋರ್ಟ್ ಕೇಸ್ ಇನ್ನು ಇತರೆ ಸೇರಿ ಸುಮಾರು ರೂ.100.00 ಕೋಟಿಗಳ ಆದಾಯ ಬರಬೇಕಾಗಿದೆ. ಪರ್ಟಿಕ್ಯೂಲರ್ರಾಗಿ ಡಿಮಾಂಡ್ ಮೊತ್ತದಂತೆ ಕಲೆಕ್ಷನ್ ಆಗಬೇಕಾಗಿದೆ.

ಸ್ಪೆಷಲ್ ಇನ್‌ಫ್ರಾಸ್ಟ್ರಕ್ಚರ್ ಪ್ರಾಜೆಕ್ಟ್ ನಗರೋತ್ಥಾನ ಅಡಿಯಲ್ಲಿ 14 ಫೈನಾನ್ಸ್ 13 ಫೈನಾನ್ಸ್‌ಗೆ ನಿರ್ಧಿಷ್ಟವಾಗಿ ಅಭಿವೃದ್ಧಿ ಕಾರ್ಯಕ್ಕಾಗಿ ಪಿ-ಕೋಡ್‌ನಲ್ಲಿ ಕೊಟ್ಟಿರುತ್ತಾರೆ ಸ್ವಚ್ಛ ಬೆಂಗಳೂರು ಎಂದು ನೀರು ಕುಡಿಯುವ ವ್ಯವಸ್ಥೆ, ಇನ್‌ಫ್ರಾಸ್ಟ್ರಕ್ಚರ್ ಇದರ ಬಗ್ಗೆ ಅಭಿವೃದ್ಧಿ ಕಾರ್ಯ ನಿರ್ವಹಣೆ ಆಗಿದೆಯೇ ಎಂಬುವುದನ್ನು ಪರಿಶೀಲಿಸಲಾಗುತ್ತಿದೆಯೇ? ಪ್ರೋಗ್ರೆಸ್ ವರದಿಯನ್ನು ಒದಗಿಸುವುದು

ಫೈನಾನ್ಷಿಯಲ್ ಪ್ರೋಗ್ರೆಸ್ ಆಫ್ 2018-19ರ ಮಾಹಿತಿಯನ್ನು ಒದಗಿಸುವುದು

ಜಿ.ಓ.ಐ. ಗ್ರ್ಯಾಂಟ್ಸ್‌ನಲ್ಲಿ ರೂ.204.00 ಕೋಟಿಗಳು ಇದ್ದು ಬಡ್ಜೆಟ್‌ನಲ್ಲಿ ಎಷ್ಟು ಖರ್ಚು ಆಗಿದೆ? ಓಪನಿಂಗ್ ಬ್ಯಾಲೆನ್ಸ್ ಸೇರಿ ರೂ.400.00 ಕೋಟಿಗಳ ಪರ್ಫಾಮೆನ್ಸ್ ಗ್ರ್ಯಾಂಟ್ಸ್ ಈ ವರ್ಷ ರೂ.207.00 ಕೋಟಿಗಳು. ರೂ.151.00 ಕೋಟಿಗಳು ಬಾಕಿ ಇರುತ್ತದೆ. ಡೆಬ್ಟ್ ಆನ್ ಕಾಲಿಂಗ್ ಒನ್ ವೀಕ್ 2017-18, 2018-19 ನೇ ಸಾಲಿನ ವರದಿ ಬರಬೇಕು ಔಟ್‌ಸೋರ್ಸ್‌ನಿಂದ ಇಂಜಿನಿಯರ್ ರವರು ಸ್ಕ್ರೂಟಿನಿ ಮಾಡುತ್ತಾರೆ. ಯಾವ ಯಾವ ಇಂಜಿನಿಯರ್ಸ್ ಅಸಸ್ಮೆಂಟ್ ಮಾಡಿ ಸ್ಟ್ರಿಕ್ಟ್ ಆಗಿ ಕಲೆಕ್ಷನ್ ಮಾಡಿಸಲು ತಿಳಿಸಿದರು.

ಅಧ್ಯಕ್ಷರು ಮಾತನಾಡುತ್ತಾ ಕಳೆದ ಬಾರಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಜಾಹೀರಾತು ನಾಮಫಲಕಗಳನ್ನು ತೆರವುಗೊಳಿಸಲು ಬಿಡುಗಡೆಗೊಂಡಿರುವ ಅನುದಾನದ ಬಗ್ಗೆ ವರದಿ ಸಲ್ಲಿಸಲು ತಿಳಿಸಿದರು.

ಮುಖ್ಯ ಲೆಕ್ಕಾಧಿಕಾರಿಗಳು ಮಾತನಾಡುತ್ತಾ ರೂ.43.00 ಕೋಟಿಗಳು ಅನುದಾನ ಬಿಡುಗಡೆಗೊಂಡಿದ್ದು ಅದಕ್ಕೆ ಒಟ್ಟು ರೂ.43.00 ಕೋಟಿಗಳು ಖರ್ಚು ಆಗಿರುತ್ತದೆ.

ಅಧ್ಯಕ್ಷರು, ಲೆಕ್ಕಪತ್ರ ಸ್ಥಾಯಿ ಸಮಿತಿರವರು ಮಾತನಾಡುತ್ತಾ Job code ಯಾವ ಆಧಾರದ ಮೇಲೆ ನೀಡಿತ್ತೀರಿ, Priority and general bills case worker ನಿಂದ bill pass ಆದಮೇಲೆ accounts superintendent / D.C.F. ಹತ್ತಿರ ಒಂದು/ಎರಡು ಏತಕ್ಕೆ ವಿಳಂಬ ಆಗುತ್ತಿದೆ, SIP ಗೆ Issue ಆಗಿರುವ Job code ನ ಬೇರೆ ಯಾವುದಾದರು GOK / SFC / General ಗೆ payment ಮಾಡುತ್ತಿರುವ ಬಗ್ಗೆ ವರದಿ ನೀಡುವುದು ಹಾಗೂ Fund position weekly once submit ಮಾಡಬೇಕು ಎಂದು ತಿಳಿಸಿ ಚರ್ಚೆ ನಡೆಸಿದರು.

[signature]

**ಅಧ್ಯಕ್ಷರು**
**ಲೆಕ್ಕಪತ್ರ ಸ್ಥಾಯಿ ಸಮಿತಿ**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**
**ಬೆಂಗಳೂರು**

ಮುಖ್ಯ ಲೆಕ್ಕಾಧಿಕಾರಿಗಳು ವಿವರವಾಗಿ ಚರ್ಚಿಸುತ್ತಾ fund position ಅನ್ನು ಏಪ್ರಿಲ್‌ನಿಂದ ನೀಡುವುದಾಗಿ ತಿಳಿಸುತ್ತಾ ಪೂರ್ಣ ವರದಿಯ ಪಟ್ಟಿಯನ್ನು ಮಾನ್ಯ ಅಧ್ಯಕ್ಷರು, ಲೆಕ್ಕಪತ್ರ ಸ್ಥಾಯಿ ಸಮಿತಿರವರಿಗೆ ಸಲ್ಲಿಸಿದರು.

ಅಂತಿಮವಾಗಿ ಅಧ್ಯಕ್ಷರು ಅಧಿಕಾರಿಗಳನ್ನು ಉದ್ದೇಶಿಸಿ, ಲೆಕ್ಕಪರಿಶೋಧನಾ ವರದಿಯಲ್ಲಿ ಆಕ್ಷೇಪಣೆ ಮತ್ತು ವಸೂಲಾತಿಗೆ ಸಂಬಂಧಿಸಿದಂತೆ, ಉತ್ತರಗಳನ್ನು ನೀಡಲು ಸೂಚಿಸಲಾಯಿತು. ಪಾಲಿಕೆಯ ಬೊಕ್ಕಸಕ್ಕೆ ಯಾವುದೇ ರೀತಿಯಲ್ಲಿ ನಷ್ಟವಾಗದಂತೆ ಕೆಲಸ ನಿರ್ವಹಿಸಲು ಸೂಚಿಸುತ್ತಾ, ತಪ್ಪಿದ್ದಲ್ಲಿ ಸೂಕ್ತ ಶಿಸ್ತು ಕ್ರಮ ಕೈಗೊಳ್ಳಲಾಗುವುದೆಂದು ಸಭೆಯಲ್ಲಿ ಪ್ರಸ್ತಾಪಿಸಿರುವ ಎಲ್ಲಾ ವಿಷಯಗಳಿಗೆ ಕ್ರಮ ವಹಿಸಲು ಘಟಕ ಕಛೇರಿಯ ಅಧಿಕಾರಿಗಳಿಗೆ ತಿಳಿಸುತ್ತಾ, ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಅಧ್ಯಕ್ಷರು
ಲೆಕ್ಕಪತ್ರ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು
ಲೆಕ್ಕಪತ್ರ ಸ್ಥಾಯಿ ಸಮಿತಿ.

<u>ಪ್ರತಿಯನ್ನು:</u>

1. ಪೂಜ್ಯ ಮಹಾಪೌರರ ಆಪ್ತ ಕಾರ್ಯದರ್ಶಿಗಳಿಗೆ ಕಳುಹಿಸುತ್ತಾ, ಈ ವಿಷಯವನ್ನು ಪೂಜ್ಯ ಮಹಾಪೌರರ ಗಮನಕ್ಕೆ ತರಲು ಕೋರಿದೆ.
2. ಉಪ ಮಹಾಪೌರರ ಆಪ್ತ ಕಾರ್ಯದರ್ಶಿಗಳಿಗೆ ಕಳುಹಿಸುತ್ತಾ, ಈ ವಿಷಯವನ್ನು ಉಪ ಮಹಾಪೌರರ ಗಮನಕ್ಕೆ ತರಲು ಕೋರಿದೆ.
3. ಆಯುಕ್ತರವರ ಅಪ್ತ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ, ಈ ವಿಷಯವನ್ನು ಮಾನ್ಯ ಆಯುಕ್ತರವರ ಅವಗಾಹನೆಗೆ ತರಲು ಕೋರಿದೆ.
4. ಆಡಳಿತ ಪಕ್ಷ/ವಿರೋಧ ಪಕ್ಷ/ಜೆ.ಡಿ.ಎಸ್.ಪಕ್ಷದ ನಾಯಕರುಗಳಿಗೆ ಮಾಹಿತಿಗಾಗಿ ಕಳುಹಿಸಿದೆ.
5. ಲೆಕ್ಕಪತ್ರ ಸ್ಥಾಯಿ ಸಮಿತಿಯ ಸದಸ್ಯರುಗಳಿಗೆ ಕಳುಹಿಸಿದೆ.
6. ವಿಶೇಷ ಆಯುಕ್ತರು (ಹಣಕಾಸು) ರವರಿಗೆ ಮಾಹಿತಿಗೆ ಕಳುಹಿಸಿದೆ.
7. ಮುಖ್ಯ ಲೆಕ್ಕಾಧಿಕಾರಿಗಳಿಗೆ ಮಾಹಿತಿಗಾಗಿ ಕಳುಹಿಸಿದೆ ಕೌನ್ಸಿಲ್ ಕಾರ್ಯದರ್ಶಿಗಳ ಮಾಹಿತಿಗಾಗಿ ಕಳುಹಿಸಿದೆ.
8. ಕಛೇರಿ ಕಡತಕ್ಕೆ.